ಟಿ. ಯಂ. ನಾರೆಣಯ್ಯನವರು ಗೋರೀಬಿದನೂರು ತಾಲ್ಲೂಕಿನಿಂದ ಚಳ್ಳಕೆರೆ ತಾಲ್ಲೂಕಿಗೆ, ರಜಾ ವಾಯಿದೆ ಮುಗಿದ ತರುವಾಯ ಹೋಗತಕ್ಕದ್ದು.

ನಂ. 6793.—ರೆ. 2635.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಹಾರ್ಸ್ ಡಿಸ್ಟ್ರಿಕ್ಟಿನಲ್ಲಿ ಜನರಲ್ ಡ್ಯೂಟಿ ಮೇಲೆ ಇರುವ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಜೆ. ಡಬ್ಲಿಯು. ನೈಟ್ ಯವರಿಗೆ, 1896ನೇ ಇಸವಿ ಫಿಬ್ರವರಿ 20ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಬೆಂಗಳೂರು ಡಿಸ್ಟ್ರಿಕ್ಟಿನ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಚಾಂಡಿ ಬಿ. ಎ. ಯವರಿಗೆ; ಮೆಸ್ಸರ್ ಜೆ. ಡಬ್ಲಿಯು. ನೈಟ್ ಯವರು, ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೆಲಸಕ್ಕೋಸ್ಕರ ಹಾರ್ಸ್ ಡಿಸ್ಟ್ರಿಕ್ಟಿಗೆ ಹಂಗಾಮಿ ತರೀಕ್ ವರ್ಗಮಾಡಲ್ಪಟ್ಟಿರುತ್ತೆ.

ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಯಂ. ಶಾಮರಾವ್ ಎಂ. ಎ. ಯವರಿಗೆ ಹಂಗಾಮಿ ತರೀಕ್ ಬೆಂಗಳೂರು ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತೆ.

ತಾರೀಖು 30ನೇ ಜನವರಿ 1896.

ನಂ. 6777.—ರೆ. 2620.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ರವಿನ್ಯೂ ಸೆಕ್ರಟೆರಿ ಮೆಸ್ಸರ್ ಸಿ. ಶ್ರೀನಿವಾಸಯ್ಯಂಗಾರ್ರಿಗೆ, 1896ನೇ ಇಸವಿ ಜನವರಿ 31ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಹತ್ತು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 6805.—ರೆ. 2647.—ಆಲೂರು ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ಎಸ್. ವೆಂಕಟರಮಣಯ್ಯನವರಿಗೆ; ಎ. ಕ್ರಿಷ್ಣೇ ಅರಸಿನವರು, ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಚನ್ನರಾಯಪಟ್ಟಣ ತಾಲ್ಲೂಕು ಅಮಲ್ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ದಿವ್ಯಾರವರ ಆಫಿಸ್ ಕ್ಲರ್ಕ್ ಎಂ. ಕೃಷ್ಣಸ್ವಾಮಯ್ಯಂಗಾರ್ ಬಿ. ಎ. ಯವರಿಗೆ, ಎಸ್. ವೆಂಕಟರಮಣಯ್ಯನವರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ ಆಲೂರು ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ವ 3ನೇ ಕ್ಯಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ಮೊಕರರ್ರಾಡಲ್ಪಟ್ಟಿರುತ್ತೆ.

ನಂ. 6780.—ರೆ. 2623.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 188ನೇ ಆರ್ಟಿಕಲ್ ಅನುಸರಿಸಿ, ಹುಜೂರು ಹಡ್ ಶಿರಸ್ತೇದಾರ್ ಮೆಸ್ಸರ್ ಸಿ. ರಾಮರಾಯರಿಗೆ, 1896ನೇ ಇಸವಿ ಫಿಬ್ರವರಿ 5ನೇ ಮುಕ್ತಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ಮೊದಲು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 31ನೇ ಜನವರಿ 1896.

ನಂ. 6802.—ರೆ. 2644.—ಗವರ್ಮೆಂಟಿನ ಅಂಡರ್ ಸೆಕ್ರಟೆರಿಯವರಾದ ಮೆಸ್ಸರ್ ಎಲ್. ಅನಂತಸಾಮಿರಾಯರು, ಮಾಹೆ ಮಜಕೂರು 31ನೇ ಮುಮ್ಮಿನ ಪೂರ್ವಾನ್ಹದಲ್ಲಿ ನವುಕರಿ ಮೇಲೆ ಮುಂಬಳಿ ಬಂದಿರುತ್ತಾರಾಗಿ 1895ನೇ ಇಸವಿ ಮೇ 30ನೇ ಮುಕ್ತಂ 21685—ಜ. 5670ನೇ ನಂ. ಗವರ್ಮೆಂಟ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಫರ್ಲೋ ರಜಾ ಪೈಕಿ ಉಳಿದ ಭಾಗ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ನಂ. 6930.—ಫಾರೆಸ್ಟ್. ಎಫ್. 119–95 ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಮೇರೆ, ವಿಶೇಷ ಕೆಲಸದ ಮೇಲಿರುವ ಫಾರೆಸ್ಟ್ ಅಸಿಸ್ಟೆಂಟ್ ಕರ್ನಸರ್ವೇಟರ್ ಮೆಸ್ಸರ್ ಹೆಚ್. ಮುತ್ತಪ್ಪನವರಿ, 1896ನೇ ಇಸವಿ ಫಿಬ್ರವರಿ 5ನೇ ಮುಕ್ತಂ ಲಾಗಾಯತು ಅಥವಾ ಅವರದನ್ನುಪಯೋಗಿಸಿಕೊಳ್ಳುವ ತಾರೀಖಿನಿಂದ 5 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬರೋಜೇಬ್,
ಸಿ. ಶ್ರೀನಿವಾಸಯ್ಯಂಗಾರ್,
ರವಿನ್ಯೂ ಸೆಕ್ರಟೆರಿ.

ಜನರಲ್.

ತಾರೀಖು 15ನೇ ಜನವರಿ 1896.

ನಂ. 7853.—ಲೋ. ಫಂ. 257—92.—1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜೆಷ್ನ್ ರೆಗ್ಯುಲೇಷನಿನ ನಿಯಮಗಳನುಸರಿಸಿ, ಅದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಷಟ್ಣಗಳು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರ ಮ್ಯುನಿಸಿಪಾಲಿಟಿಯಲ್ಲಿ ಕುಂಬಾರಕೆರೆಗೆ ಹೋಗುವ ರಸ್ತೆಯನ್ನೂ ಮತ್ತು ನಡುವಾಲವೇಟೆ ರಸ್ತೆಯನ್ನೂ ಸುಧಾ ಒಡಂಯಿಸುವ ಬಗ್ಗೆ ಬೇಕಾಗಿರುತ್ತೆ.

ತಾರೀಖು 28ನೇ ಜನವರಿ 1896.

ನಂ. 8681.—ಲೋ. ಫಂ. 372—92.—ಚಿತ್ರದುರ್ಗದ ಮ್ಯುನಿಸಿಪಾಲಿಟಿಯ ಮೆಂಬರಾದ ಮೆಸ್ಟರ್ ಲಿಂಗಪ್ಪನವರು, ಅವರ ಉದ್ಯೋಗದ ವಾಯಿದೆಯನ್ನು ಪೂರ್ತಿಮಾಡಿರುವದರಿಂದ ಯಿನ್ನೂ ಐದು ವರುಷಗಳ ಪರಿಯಂತ ಮರಳಿ ಮೊಕರರ್ಮಾಡಲ್ಪಟ್ಟ ರುತ್ತಾರೆ.

ತಾರೀಖು 29ನೇ ಜನವರಿ 1896.

ನಂ. 8758.—ಜು. 953—ಬೆಂಗಳೂರಿನ ಅಡಿಷನಲ್ ಮ್ಯುನಿಸಿಪರಾದ ಮೆಸ್ಟರ್ ಯುಂ. ಹಂಜಾ ಹುಸೇನ್ ಯವರು ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 174ನೇ ಸೆಕ್ಷನ್ ಅನುಸರಿಸಿ, 1896ನೇ ಇಸವಿ ಜನವರಿ 18ನೇ ಮಾರ್ಕ್ಕಂ ಲಾಗಾಯತು 9 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 8779.—ಮಿಸ್. 1205.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 172ನೇ ಆರ್ಟಿಕಲ್ ಅನುಸರಿಸಿ, ಚಿತ್ರದುರ್ಗದ ಡಿಸ್ಪೆನ್ಸರಿ ಅಸಿಸ್ಟೆಂಟ್ ಸರ್ಜರ್ ಮೆಸ್ಟರ್ ಡಬ್ಲ್ಯಿಯು. ಶ್ರೀನಿವಾಸಯ್ಯಂಗಾರ್ರು, ಮುಂದಿನ ತಿಂಗಳ ಗುರ್ತೀತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖು ವೊದಲು ಹತ್ತು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. 8785.—ಜು. ಫೈ. 3—93—1892ನೇ ಇಸವಿ ಫಿಬ್ರವರಿ 23ನೇ ಮಾರ್ಕ್ಕಂ 13660—1—114ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್ ಷರತ್ತುಗಳನುಸರಿಸಿ, ಎರಡನೇ ಕ್ಲಾಸ್ ಸಬ್ ಅಸಿಸ್ಟೆಂಟ್ ಸರ್ಜಿಯರ್ರಾದ ಮೆಸ್ಸರ್ಸ್ ಜೆ. ಎ. ಕೊಯಲ್ಲೊ, ಎಲ್. ಎಂ. ಎಸ್. ಮತ್ತು ವಿ. ಅಬ್ಬಾಯಿನಾಯಿಡು, ಎಲ್. ಎಂ. ಎಸ್. ಯವರು ಸದರೀ ಕ್ಲಾಸಿನಲ್ಲಿ ಯರಡುವರುಷಗಳ ಪರಿಯಂತ ಮೆಹನತ್ತಿನಿಂದ ನೌಕರಿಮಾಡಿರುತ್ತಾರಾಗಿ 1895ನೇ ಇಸವಿ ಅಕ್ಟೋಬರ್ 20ನೇ ಮಾರ್ಕ್ಕಂ ಲಾಗಾಯತು ಬಂದನೇಕ್ಲಾಸಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.

ನಂ. 8794.—ಜು. 958.—1877ನೇ ಇಸವಿ IIIನೇ ನಂಬರ್ ರಿಜಿಸ್ಟ್ರೇಷ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ, ಗವರ್ನ್ಮೆಂಟಿನವರು ಆಜ್ಞಾಪಿಸುವದೇನಂದರೆ, ಇದರಡಿ ಕಂಡ ಸ್ಪೆಷಲ್ ಸಬ್ ರಿಜಿಸ್ಟ್ರಾರ್ಗಳ ವೊಕರರಾತಿಯು, 1896ನೇ ಇಸವಿ ಫಿಬ್ರವರಿ 15ನೇ ಮಾರ್ಕ್ಕಂ ಲಾಗಾಯತು ಜಾರಿಯಲ್ಲಿ ಬರತಕ್ಕದ್ದು:—

I. ತುಮಕೂರು ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಆಫಿಸ್ ಹೆಡ್ ಕ್ಲರ್ಕ್ ಎ. ಮಹದೇವ ವೊದಲಿಯಾರ್ರು, ದೇವನಹಳ್ಳಿಯ 3ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ರಾಗಿರತಕ್ಕದ್ದು.

II. ಎಸ್. ಶಾಮರಾವ್ ಬಿ. ಎ. ಯವರು, ನೆಲವಂಗಲದ 3ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ರಾಗಿರತಕ್ಕದ್ದು.

III. ಲೆಜಿಸ್ಲೇಟಿವ್ ಇಲಾಖಾ ಡೆಪ್ಯೂಟಿ ಟ್ರಾನ್ಸ್‌ಲೇಟರ್ ಟಿ. ಬಿ. ವೆಂಕಟಾಚಾರ್ರು, ತುಮಕೂರಿನ 3ನೇ ಗ್ರೇಡ್ ಸಬ್ ರಿಜಿಸ್ಟ್ರಾರ್ರಾಗಿರತಕ್ಕದ್ದು.

ತಾರೀಖು 30ನೇ ಜನವರಿ 1896.

ನಂ. 8836.—ಯು. 240.—ಬೆಂಗಳೂರು ಸೆಂಟ್ರಲ್ ಕಾಲೇಜಿನ ವೆಥವಾಟಿಕ್ಸ್‌ಯಾನೆ ಗಣಿತ ಶಾಸ್ತ್ರದ ಪ್ರೊಫೆಸರ್ ಆದ ಮೆಸ್ಟರ್ ಟಿ. ಆರ್. ವೆಂಕಟಸಾಮಿನಾಯಡುಯವರು, ಮೈಸೂರು ಯಡ್ಯುಕೇಷನ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಯವರಿಗೆ ಅಸಿಸ್ಟೆಂಟರಾಗಿ ವೊಕರರ್ಮಾಡಲ್ಪಟ್ಟಿರುತ್ತಾರೆ. ಹಾಲಿ ಇರತಕ್ಕ ಉದ್ಯೋಗದ ಚಾರ್ಜ್ ಒಪ್ಪಿಸಿದ ತರುವಾಯ ವೊಕರರ್ ಕೆಲಸದ ಮೇಲೆ ಹಾಜರಾಗತಕ್ಕದ್ದು.

ತಾರೀಖು 31ನೇ ಜನವರಿ 1896.

ನಂ. 8875.—ಯು. 245.—ಇದರಡಿ ಕಂಡ ಆಫಿಸರ್ಗಳು, ಮೈಸೂರ್ ಸಿವಿಲ್ ನೌಕರಿಬಗ್ಯಾಗಿ 1893ನೇ ಇಸವಿ ಜೂನ್ 24ನೇ ಮಾರ್ಕ್ಕಂ 21411—24 ಜಿ. ಯಫ್. 387—92ನೇ ನಂಬರ್ ಗವರ್ನಮೆಂಟ್ ಪ್ರೊಸಿಡಿಂಗ್ಸ್‌ನಲ್ಲಿ ವಿಧಿಸಲ್ಪಟ್ಟ ದರ್ಜೆಯ ಪರೀಕ್ಷೆಯನ್ನು ಕನ್ನಡದಲ್ಲಿ ಕೊಟ್ಟು ತೇರ್ಗಡೆಯಾಗಿರುತ್ತಾರೆ:—

I. ಪ್ರಜೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ವಿ. ಆರ್. ತ್ಯಾಗರಾಜಯ್ಯರ್ ಎಂ. ಎ. ಯವರು.

II. ಪ್ರಜೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಚಾಂಡಿ ಬಿ, ಎ. ಯವರು.

ನಂ. 8892.—ಜು. 970.—ಮೈಸೂರ್ ದೇಕದ ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್‌ರಾವ್ ಮೆಸ್ಟರ್ ವಿ. ಪಿ. ಮಾಧವರಾಯರವರು ಅವರ ಆಫಿಸ್ ಚಾರ್ಜನ್ನು 1896ನೇ ಇಸವಿ ಜನವರಿ 27ನೇ ಮಾರ್ಕ್ಕಮಿನ ಪೂರ್ವಾನ್ಹದಲ್ಲಿ ಮೆಸ್ಟರ್ ಕೆ. ಪಿ. ಪುಟ್ಟಣ್ಣಶೆಟ್ಟರವರಿಂದ ವಹಿಸಿ ಇರುತ್ತಾರೆ.

1896ನೇ ಇಸವಿ ಜನವರಿ 3ನೇ ಮಾರ್ಕ್ಕಂ 7464.—ಜು. 834ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟ ಬಂದು ತಿಂಗಳ ಪ್ರಿವಿಲೀಜ್ ರಜಾ ಪೈಕಿ ಉಳಿದ ಭಾಗ ಅಂದರೆ, ಹತ್ತು ದಿವಸಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ವಿ. ಎನ್. ನರಸಿಂಹಯ್ಯಂಗಾರ್,
ಜನರಲ್ ಸೆಕ್ರಿಟೆರಿ.